ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ನವಲಗುಂದ

# ಸಿ.ಸಿ. ನಂ.**844/2024**

ಫಿರ್ಯಾದಿದಾರರು : ಕರ್ನಾಟಕ ಸರಕಾರ, ಅಣ್ಣಿಗೇರಿ ಪಿ.ಎಸ್.

ವಿರುದ್ಧ

ಆರೋಪಿತರು 1. ಭರಮಪ್ಪ ಫಕ್ಕಿರಪ್ಪ ತೊರವಿ

## <u>ದೋಷಾರೋಪಣೆ</u>

ನಾನು ನವೀನ ಎಫ್. ಡಿಸೋಜಾ. ಬಿ.ಬಿ.ಎ.,ಎಲ್.ಎಲ್.ಬಿ.,(ಸ್ಪೇಷಲ್)., ಪ್ರ.ದ.ನ್ಯಾ.ದಂ.ಗಳು ನವಲಗುಂದ ಆದ ನಾನು

ಆರೋಪಿತರು 1. ಭರಮಪ್ಪ ಫಕ್ಕಿರಪ್ಪ ತೊರವಿ
ವಯಾಃ 65 ವರ್ಷ, ಉದ್ಯೋಗಃ ಒಕ್ಕಲುತನ
ಸಾಃ ಬಸಾಪೂರ ಮೊಕಾಶಿ ಓಣಿ , ತಾಃ ಅಣ್ಣಿಗೇರಿ
ಜಿಲ್ಲಾಃ ಧಾರವಾಡ

ನಿಮ್ಮ ಮೇಲೆ ಈ ಕೆಳಕಂಡ ಆರೋಪಗಳನ್ನು ಮಾಡಿರುತ್ತೇನೆ.

ದಿನಾಂಕಃ 04.03.2024 ರಂದು ರಾತ್ರಿ ಸುಮಾರು 08.00 ಗಂಟೆಯ ಸುಮಾರಿಗೆ ಅಣ್ಣಿಗೇರಿ ಪೋಲೀಸ ಠಾಣೆಯ ಹದ್ದಿಯ ಪೈಕಿ ಬಸಾಪೂರ ಗ್ರಾಮದ ದುಂಡಿ ಬಸವೇಶ್ವರ ದೇವಸ್ಥಾನದ ಮುಂದೆ ಸಾರ್ವಜನಿಕ ಖುಲ್ಲಾ ಜಾಗೆಯಲ್ಲಿ ಆರೋಪಿಯಾದ ನೀವು ನಿಮ್ಮ ಸ್ವಂತ ಫಾಯ್ದೆಗೋಸ್ಕರ ಯಾವುದೇ ಪಾಸು ವ ಪರ್ಮಿಟ್ ಇಲ್ಲದೆ ಸರಕಾರದ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡುವ ಉದ್ದೇಶದಿಂದ ಒಂದು ಕೈ ಚೀಲದಲ್ಲಿ 90 ಎಮ್.ಎಲ್ ಅಳತೆಯ ಓರಿಜಿನಲ್ ಚಾಯ್ಸ ಡಿಲಕ್ಸ್ ವಿಸ್ಕಿ ತುಂಬಿದ ಒಟ್ಟು 30 ಟೆಟ್ರಾ ಪಾಕೇಟಗಳನ್ನು ಎಲ್ಲಿಂದಲೋ ಸಾಗಾಟ ಮಾಡಿಕೊಂಡು ಬಂದು ನಿಮ್ಮ ತಾಬಾದಲ್ಲಿ ಅಕ್ರಮವಾಗಿ ಇಟ್ಟುಕೊಂಡು ಮಾರಾಟ ಮಾಡುತ್ತಿರುವಾಗ ದಾಳಿ ಕಾಲಕ್ಕೆ ಸಿಕ್ಕಿದ್ದು, ಆ ಮೂಲಕ ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ಮತ್ತು 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಅಧಿಕಾರದ ವ್ಯಾಪ್ತಿಯಲ್ಲಿ ಎಸಗಿರುವುದಾಗಿ ಆರೋಪಿಸುತ್ತೇನೆ.

**ಪ್ರಶ್ನೆ.1:** ಮೇಲೆ ಓದಿ ಹೇಳಿದ ಆಪಾದನೆ ತಿಳಿಯಿತೆ ?

ಉತ್ತರಃ

**ಪ್ರಶ್ನೆ.2:** ಆಪಾದನೆಯನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆಯಾಗಬೇಕೋ ?

ಉತ್ತರಃ

ಮೇಲ್ಕಂಡ ಅಪರಾಧಗಳನ್ನು ನನ್ನ ಕಾರ್ಯಕಕ್ಷೆಯಲ್ಲಿ ಎಸಗಿರುವುದರಿಂದ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತೇನೆ.

(ಮೇಲಿನ ಆಪಾದನೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವರಿಂದ ಉತ್ತರ ಪಡೆದು ಬಹಿರಂಗ ನ್ಯಾಯಾಲಯದಲ್ಲಿ ನಮೂದು ಮಾಡಲಾಯಿತು)

ನವಲಗುಂದ.
ದಿನಾಂಕಃ10.03.2026

(ನವೀನ ಎಫ್. ಡಿಸೋಜಾ)
ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನವಲಗುಂದ.